ಕ್ರಿಮಿನಲ್ ಮಿಸ್ ನಂಃ12/2021
ಆರ್‌ಡಬ್ಲುಃ 01

ಸಾಕ್ಷಿಯನ್ನು ದಿನಾಂಕಃ **20.09.2025** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲುಃಶ್ರೀ ಹೆಚ್.ಯು.ಎನ್. ವಕೀಲರಿಂದಃ**

ನಮ್ಮ ಮೂಲ ಮನೆ ಕಾರವಾರದಲ್ಲಿದೆ. ನನ್ನ ತಂದೆಯವರು ವಾಟರ್ ಸಪ್ಲಾಯ್ ಕೆಲಸ ಮಾಡುತ್ತಿದ್ದರು. ನನ್ನ ತಾಯಿ ಗೃಹಿಣಿ. ನನ್ನ ತಂದೆಗೆ ಒಟ್ಟೂ 6 ಜನ ಮಕ್ಕಳಿದ್ದು, ಅದರಲ್ಲಿ ಇಬ್ಬರು ಗಂಡು ಮಕ್ಕಳು ಹಾಗೂ 4 ಜನ ಹೆಣ್ಣು ಮಕ್ಕಳು. ನಾನು ನನ್ನ ತಂದೆಗೆ ಹಿರಿಯ ಮಗ. ನಾನು ಕುಮಟಾದಲ್ಲಿ ಡಿಪ್ಲೋಮಾ ಮಾಡಿರುತ್ತೇನೆ. ನಾನು ಬಿ.ಕಾಂ. ವಿದ್ಯಾಭ್ಯಾಸ ಮಾಡಿರುತ್ತೇನೆ. ಆನಂತರ ಬೆಂಗಳೂರಿಗೆ ಕೆಲಸಕ್ಕಾಗಿ ಹೋಗಿರುತ್ತೇನೆ.

ನಾನು 2006 ನೇ ಸಾಲಿನಲ್ಲಿ ಅಮೆರಿಕಾದ ಒಂದು ಕಂಪನಿಗೆ ಪ್ರಥಮ ಬಾರಿಗೆ ಸೇರಿಕೊಂಡೆನು. ನಾನು ಮದುವೆಯಾಗುವ ಕಾಲಕ್ಕೆ ಸದ್ರಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೆನು. ನಾನು ಮದುವೆಯಾಗುವ ಪೂರ್ವದಲ್ಲಿ ಬೆಂಗಳೂರಿನ ವೈಟ್‌ಫೀಲ್ಡನಲ್ಲಿ ವಾಸವಿದ್ದೆನು. ಆ ಸಂದರ್ಭದಲ್ಲಿ ನನ್ನ ತಾಯಿ ಹಾಗೂ ನನ್ನ 4 ಜನ ಸಹೋದರಿಯವರು ಬೆಂಗಳೂರಿನಲ್ಲಿ ನನ್ನ ಜೊತೆ ವಾಸವಿದ್ದರು.

ನನ್ನ ಮದುವೆಯಾಗುವ ಪೂರ್ವದಲ್ಲಿ ನನ್ನ ಇಬ್ಬರು ಸಹೋದರಿಯರ ಮದುವೆಯಾಗಿದ್ದು, ಅವರು ಅವರ ಗಂಡನ ಮನೆಯಲ್ಲಿ ವಾಸವಾಗಿದ್ದರು. ನನ್ನ ಇನ್ನುಳಿದ ಇಬ್ಬರು ಸಹೋದರಿಯರ ಮದುವೆಯು ಇನ್ನೂವರೆಗೂ ಆಗಿರುವುದಿಲ್ಲ. ನನ್ನ ನಾಲ್ಕೂ ಜನ ಸಹೋದರಿಯರು ನಾನು ಕೆಲಸ ಮಾಡುವ ಕಂಪನಿಯಲ್ಲಿಯೇ ಕೆಲಸವನ್ನು ಮಾಡುತ್ತಿದ್ದರು. 1 ನೇ ಅರ್ಜಿದಾರಳ ಮದುವೆಯ ಪ್ರಪೋಸಲನ್ನು ಸಿರಿಲ್ ಗೊನ್ಸಾಲ್ವೀಸ್ ರವರು ನನ್ನ ಮುಂದೆ ತಂದಿದ್ದರು. ನಾನು ಮದುವೆಯಾಗುವ ಪೂರ್ವದಲ್ಲಿ 1 ನೇ ಅರ್ಜಿದಾರಳ ಕುರಿತಾಗಿ ಹಾಗೂ ಅವರ ಕುಟುಂಬದವರ ಬಗ್ಗೆ ವಿಚಾರಿಸಿದ್ದೇನೆ.

1 ನೇ ಅರ್ಜಿದಾರಳ ತಂದೆಯು ಮೇಣದಬತ್ತಿ ವ್ಯವಹಾರವನ್ನು ಹಾಗೂ ಕ್ಯಾಟರಿಂಗ್ ಕೆಲಸವನ್ನು ಮಾಡುತ್ತಿದ್ದರು. ನಾನು 1 ನೇ ಅರ್ಜಿದಾರಳ ಮನೆಗೆ ಹೋಗಿ ಮದುವೆಯ ಮಾತುಕತೆ ಮಾಡಿದ್ದೇನೆ. 1 ನೇ ಅರ್ಜಿದಾರಳು ನನ್ನ ಮುಂದೆ ಅವರ ತಂದೆ ತಾಯಿಯು ಆರ್ಥಿಕವಾಗಿ ಬಡವರು ಎಂದು ಹೇಳಿದ್ದರು ಎಂದರೆ ಸರಿ. ನಾನು ಮದುವೆಯಾಗುವ ಪೂರ್ವದಲ್ಲಿ ಅಮೇರಿಕಾದ ಕಂಪನಿಯಲ್ಲಿ ಕೆಲಸ ಮಾಡುವುದಾಗಿ ಹಾಗೂ ಒಳ್ಳೆಯ ಸಂಬಳವಿದೆ ಎಂಬುದಾಗಿ ಹೇಳಿದ್ದೇನೆ ಎಂದರೆ ಸರಿ.

ನನ್ನ ಮದುವೆಯಾದ ನಂತರ ನಾನು ಸ್ವಲ್ಪ ದಿನಗಳ ಕಾಲ ನನ್ನ ಹೆಂಡತಿಯನ್ನು ನಮ್ಮ ಮನೆಗೆ ಕರೆದುಕೊಂಡು ಬಂದಿದ್ದೆನು, ಆನಂತರ ಸ್ವಲ್ಪ ದಿನಗಳ ತರುವಾಯ ಅವಳನ್ನು ಬೆಂಗಳೂರಿಗೆ ಕರೆದುಕೊಂಡು ಹೋಗಿದ್ದೆನು. ಮದುವೆಯಾದ ನಂತರ ನಾನು, ನನ್ನ ಹೆಂಡತಿ ಹಾಗೂ ನನ್ನ ತಾಯಿ ಜೊತೆ ಬೆಂಗಳೂರಿನಲ್ಲಿ ವಾಸವಿದ್ದೆನು. ನನ್ನ ಮದುವೆಯಾದ ನಂತರ ನನ್ನ ಎಲ್ಲಾ ಸಹೋದರಿಯರು ನನ್ನ ಜೊತೆ ವಾಸವಿದ್ದರು ಎಂದರೆ ಸರಿಯಲ್ಲ.

ನನಗೆ ಈಗ ಅನಾರೋಗ್ಯ ಇರುವುದರಿಂದ ನಾನು ಯಾವುದೇ ಕೆಲಸವನ್ನು ಮಾಡುತ್ತಿಲ್ಲ. ಈಗ ನಾನು ನಿರುದ್ಯೋಗಿಯಾಗಿದ್ದೇನೆ. 1 ನೇ ಅರ್ಜಿದಾರಳು 2018 ನೇ ಸಾಲಿನಲ್ಲಿ ನನ್ನ ಬಿಟ್ಟು ಹೋದ ತರುವಾಯ ನಾನು ಸ್ವಲ್ಪ

ದಿನಗಳ ಕಾಲ ಕೆಲಸವನ್ನು ಮುಂದುವರಿಸಿ, ಆನಂತರ ನನಗೆ ಆರೋಗ್ಯದ ಸಮಸ್ಯೆಗಳು ಉಂಟಾಗಿದ್ದರಿಂದ ನಾನು ಕೆಲಸವನ್ನು ಬಿಟ್ಟಿದ್ದೇನೆ.

ನಾನು 2019 ರ ಆಗಸ್ಟ್ ತಿಂಗಳಿನಲ್ಲಿ ಕೆಲಸವನ್ನು ಬಿಟ್ಟಿದ್ದೇನೆ. ಆನಂತರ ನಾನು ಸ್ವಲ್ಪ ದಿನಗಳ ಕಾಲ ಬೆಂಗಳೂರಿನಲ್ಲಿದ್ದು, ಬೇರೆ ಕೆಲಸವನ್ನು ನೋಡಲು ಪ್ರಯತ್ನಿಸಿದ್ದೆನು, ಆನಂತರ ಕಾರವಾರದ ನಮ್ಮ ಮನೆಗೆ ಬಂದು ನೆಲೆಸಿದೆನು. ನಾನು ಯಾವ ದಿನಾಂಕದಂದು ಬೆಂಗಳೂರಿನಿಂದ ಕಾರವಾರಕ್ಕೆ ಬಂದು ನೆಲೆಸಿದ್ದೆನು ಎಂಬುದಾಗಿ ನನಗೆ ಸ್ಪಷ್ಟವಾಗಿ ನೆನಪಿಲ್ಲ. ಬೆಂಗಳೂರಿನಲ್ಲಿ ಒಂದು ತಿಂಗಳಿಗೆ ರೂ.10,000/- ಮನೆ ಬಾಡಿಗೆಯನ್ನು ನೀಡುತ್ತಿದ್ದೆನು. ನಾನು ವೈಟಫೀಲ್ಡನಲ್ಲಿ ಬಾಡಿಗೆ ಮನೆಯಲ್ಲಿ ಇದ್ದೆನು.

ನಾನು ಕೆಲಸವನ್ನು ಬಿಟ್ಟ ಎಷ್ಟು ದಿನಗಳ ಕಾಲ ಬೆಂಗಳೂರಿನಲ್ಲಿ ನೆಲೆಸಿದ್ದೆನು ಎಂಬುದನ್ನು ಸ್ಪಷ್ಟವಾಗಿ ನನಗೆ ಹೇಳಲು ಆಗುವುದಿಲ್ಲ, ಆದರೆ ಅಂದಾಜು 6 ತಿಂಗಳು ಅಲ್ಲಿಯೇ ಇದ್ದೆನು. ಆನಂತರ ನಾನು ಸ್ವಲ್ಪ ದಿನಗಳ ಕಾಲ ಆನೇಕಲ್ ತಾಲೂಕಿನಲ್ಲಿರುವ ನನ್ನ ಸಹೋದರಿಯ ಮನೆಯಲ್ಲಿ ಇದ್ದೆನು, ಆದರೆ ಎಷ್ಟು ದಿನ ಎಂಬುದನ್ನು ನನಗೆ ಸ್ಪಷ್ಟವಾಗಿ ಹೇಳಲು ಆಗುವುದಿಲ್ಲ. ನನ್ನ ಇನ್ನೊಬ್ಬ ಸಹೋದರಿಯ ಊರು ಅಂಗಡಿಯಾಗಿರುತ್ತದೆ. ನಾನು ಈ ಹಿಂದೆ ಬೆಂಗಳೂರಿನಲ್ಲಿ ಸಲ್ಲಿಸಿದ ಅರ್ಜಿಯಲ್ಲಿ ವಿಳಾಸವನ್ನು ನಮೂದಿಸಿದ್ದು ಅದು ಸರಿಯಾಗಿದೆ. ನಿ.ಆರ್. 3 ರ ದಾಖಲೆಯಲ್ಲಿ 1 ನೇ ಅರ್ಜಿದಾರಳ ಮತ್ತು ನನ್ನ ವಿಳಾಸವನ್ನು ನಮೂದಿಸಲಾಗಿದೆ. ನಾನು ಈಗಲೂ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಅರ್ಜಿದಾರಳಿಗೆ ಜೀವನಾಂಶವನ್ನು ಕೊಡಬೇಕಾಗಬಹುದೆಂಬ ಉದ್ದೇಶದಿಂದ ಕೆಲಸವನ್ನು ಬಿಟ್ಟಿದ್ದೇನೆ ಎಂದರೆ ಸರಿಯಲ್ಲ. ನಿ.ಆರ್.3 ರ ದಾಖಲೆಯಲ್ಲಿ 1 ನೇ ಅರ್ಜಿದಾರಳ ಕುರಿತಾಗಿ ನಮೂದಿಸಿದ್ದು ಇರುವುದಿಲ್ಲ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೇಳಿದ್ದು ಸಮಯ ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

ಸಹಿ ಇದೆ/-

ಪ್ರ.ದ.ನ್ಯಾದಂ., ಹೊನ್ನಾವರ.